ಓ ಎಸ್ ನಂಃ 455/2023
ಪಿ. ಡಬ್ಲ್ಯೂ-1

**(ಇಂದು ದಿನಾಂಕ 24-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿ ನಂಃ 1 ರಿಂದ 5 ರವರ ಪರ ಶ್ರೀ ಡಿ ಜಿ ಪಿ ವಕೀಲರಿಂದ**

ವಾದಿ ಸಂಸ್ಥೆಯು ಮೊದಲು ಟ್ರಸ್ಟ ಇರಲಿಲ್ಲ ಸಂಘ ಇತ್ತು . ನಮ್ಮ ಸಂಸ್ಥೆ ಸಂಘ ರಚನೆಯಾಗುವ ಮೊದಲು ಟ್ರಸ್ಟ ಎಂದು ಆಸ್ತಿತ್ವದಲ್ಲಿ ಇರಲಿಲ್ಲ . 1936 ರಲ್ಲಿ ನಮ್ಮ ಸಂಘ ನೊಂದಣಿಯಾಗಿದೆ . ನಮ್ಮ ಸಂಸ್ಥೆಯ ಸಂಘ ನಂತರ ನೊಂದಣಿಯಾಗಿದ್ದು ಅದರ ಮೊದಲು ಟ್ರಸ್ಟ ಇತ್ತು ಎಂದರೆ ಸರಿಯಲ್ಲ . ವಾದಿ ಸಂಸ್ಥೆ ಸಂಘ ಎಂದು ನೊಂದಣಿಯಾದ ಬಗ್ಗೆ ತೋರಿಸುವ ದಾಖಲೆ ಹಾಜರುಪಡಿಸಿಲ್ಲ . ಈ ದಾವೆಯನ್ನು ನಮ್ಮ ಟ್ರಸ್ಟನ ಆಸ್ತಿ ಬರಬೇಕು ಮತ್ತು ಬಾಕಿ ಇರುವ ಬಾಡಿಗೆ ಬರಬೇಕು ಎಂದು ದಾಖಲಿಸಿದ್ದೇವೆ . ನಾವು ಮೂಲತಃ ದಾವಾ ಸ್ವತ್ತಿನ ಮಾಲೀಕರಲ್ಲ ಎಂದರೆ ಸರಿಯಲ್ಲ . 1924 ರಲ್ಲಿ ಧಾರವಾಡ ಜಿಲ್ಲಾಧಿಕಾರಿಗಳು ದಾವಾ ಸ್ವತ್ತನ್ನು ನಮ್ಮ ಸಂಸ್ಥೆಗೆ ಲೀಸ್ ಮೂಲಕ ಕೊಟ್ಟಿದ್ದಾರೆ . ಲೀಸ್ ಕೇವಲ 50 ವರ್ಷಕ್ಕೆ ಕೊಟ್ಟಿದ್ದರು ಅಥವಾ ಅದು ಮುಂದುವರೆಸಲಾಗಿದೆ ಎಂದು ತೋರಿಸುವ ದಾಖಲೆ ನಮ್ಮಲ್ಲಿ ಇಲ್ಲ .

ನೀವು ಯಾವ ರೀತಿಯಲ್ಲಿ ಸಂಸ್ಥೆಯ ಮಾಲೀಕತ್ವ ಪಡೆದಿರಿ ಎಂದು ಕೇಳಿದರೆ ಸಾಕ್ಷಿಯು ಸರ್ಕಾರಿ ಆದೇಶದ ಪ್ರಕಾರ ಎಂದು ಹೇಳುತ್ತಾರೆ . ಸದರಿ ಆದೇಶವನ್ನು ಹಾಜರುಪಡಿಸಿದ್ದಿರಾ ಎಂದು ಕೇಳಿದರೆ ಸಾಕ್ಷಿಯು ಅದು ನಮಗೆ ಸಿಕ್ಕಿಲ್ಲ ಎಂದು ಹೇಳುತ್ತಾರೆ . ದಾವಾ ಸ್ವತ್ತಿನ ಕುರಿತು ನಮ್ಮ ಸಂಸ್ಥೆಗೆ ಸರ್ಕಾರದಿಂದ ಯಾವುದೇ ಆದೇಶ ಆಗಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಕಂದಾಯ ಇಲಾಖೆಯ ದಾಖಲೆಗಳಲ್ಲಿ

ವಾದಿ ಸಂಸ್ಥೆಯ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಸಿಟಿ ಸರ್ವೆಯಲ್ಲಿ ನಮೂದಾಗಿದೆ ಎಂದು ಹೇಳುತ್ತಾರೆ . ಸಿಟಿ ಸರ್ವೆಯಲ್ಲಿ ಸಾಮಾನ್ಯವಾಗಿ ಸ್ವತ್ತಿನ ಸ್ವಾಧೀನ ಹೊಂದಿರುವವರು ಹೆಸರು ನಮೂದಿಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ .

ನಮ್ಮ ಸಂಘ 1985 ರಲ್ಲಿ ನೊಂದಣಿಯಾಗಿದೆ ಎಂದರೆ ಸಾಕ್ಷಿಯು 1936 ರಲ್ಲಿ ನೊಂದಣಿಯಾಗಿದೆ ಎಂದು ಹೇಳುತ್ತಾರೆ . 1936 ರಲ್ಲಿ ಸಂಘ ನೊಂದಣಿಯಾಗುವ ಕಾಲಕ್ಕೆ ಎಷ್ಟು ಜನ ಸದಸ್ಯರಿದ್ದರು ಎಂದು ನನಗೆ ಗೊತ್ತಿಲ್ಲ . ಆ ಸಮಯದಲ್ಲಿ ಅಧ್ಯಕ್ಷರು ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ . ನಾನು 2014 ರಲ್ಲಿ ಸದಸ್ಯತ್ವ ಪಡೆದಿದ್ದೇನೆ . ಅದರ ಕುರಿತಾದ ದಾಖಲೆ ಹಾಜರುಪಡಿಸಿಲ್ಲ . ನಮ್ಮ ವಾದಿ ಸಂಸ್ಥೆಯ ಬೈಲಾ ಇದೆ . ನಮ್ಮ ಟ್ರಸ್ಟನ ಸದಸ್ಯರ ಪಟ್ಟಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ . ನಮ್ಮ ಟ್ರಸ್ಟನ ಸದಸ್ಯರು ತಮ್ಮ ಚಂದಾಹಣವನ್ನು ಪಾವತಿಸಿರುವ ದಾಖಲೆಗಳನ್ನು ಹಾಜರುಪಡಿಸಿಲ್ಲ . ನಮ್ಮ ವಾದಿ ಸಂಸ್ಥೆಯ ಬೈಲಾದಲ್ಲಿ ಕಾಲ ಕಾಲಕ್ಕೆ ಚುಣಾವಣೆ ಮಾಡುವ ಷರತ್ತು ಇದೆ . ಈ ಹಿಂದೆ ಆಡಳಿತ ಮಂಡಳಿ ಇದ್ದ ಕಾಲಕ್ಕೆ ಚುಣಾವಣೆ ನಡೆದಿದೆ .

ನಮ್ಮ ಸಂಸ್ಥೆಯ ಆಡಳಿತ ಕಚೇರಿಯು ಎನ್ ಟಿ ಟಿ ಎಫ್ ಹತ್ತಿರ ಇರುತ್ತದೆ . ನಾನು 6-7 ವರ್ಷಗಳಿಂದ ವಾದಿ ಸಂಸ್ಥೆಯ ಸಹಾ - ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ . ನಾನು ಕೋ- ಆಪಶನ್ ಮೂಲಕ ಸಹಾ - ಕಾರ್ಯದರ್ಶಿ ಆಗಿದ್ದೇನೆ . ವಾದಿ ಸಂಸ್ಥೆಯ ವಾದಿ ನಂಃ 2 , 3 , 5 ರಿಂದ 9 ರವರು ಸದಸ್ಯರು ಇರುತ್ತಾರೆ ಎಂದು ತೋರಿಸುವ ದಾಖಲೆ ಹಾಜರುಪಡಿಸಿಲ್ಲ . ವಾದಿ ಸಂಸ್ಥೆಯಲ್ಲಿ ನಿಯತಕಾಲಕ್ಕೆ ಸಭೆಗಳು ನಡೆಯುತ್ತವೆ . ಈ ದಾವೆ ದಾಖಲಿಸಲು ಠರಾವು ಹೊರಡಿಸಿದ್ದಾರೆ ದಾಖಲೆಯನ್ನು

ಹಾಜರುಪಡಿಸಿದ್ದೇನೆ . ನಿಪಿ-5 ರನ್ವಯ ಠರಾವು ಮಾಡಿದ ಮೊದಲು ಮಾಡಿದ ಠರಾವುಗಳ ಪ್ರತಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ . ನಮ್ಮ ಸಂಸ್ಥೆಯ ಬೈಲಾದ ಪ್ರಕಾರ ನಾವು ಯಾವುದೇ ಕ್ರಮಗಳನ್ನು ಅನುಸರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಹಣಕಾಸಿನ ವ್ಯವಹಾರವನ್ನು ತೋರಿಸುವ ದಾಖಲೆ ಹಾಜರುಪಡಿಸಿಲ್ಲ . ನಮ್ಮ ಸಂಸ್ಥೆಯ ಸದಸ್ಯರ ದಾಖಲೆಯನ್ನು ಹಾಜರುಪಡಿಸಿಲ್ಲ . ನಾನು ಹೇಳಿದಂತೆ ಸದಸ್ಯರ ಚಂದ ಹಣ ಸಂಗ್ರಹಿಸಿಲ್ಲ ಮತ್ತು ಈ ಕುರಿತಾದ ದಾಖಲೆಗಳನ್ನು ಪಾಲನೆ ಮಾಡಿಲ್ಲ ಎಂದರೆ ಸರಿಯಲ್ಲ . ವಾದಿಯ ಸಂಘ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ .

ದಾವಾ ಆಸ್ತಿಯಲ್ಲಿ ಶೈಕ್ಷಣಿಕ ಸಂಸ್ಥೆ ನಡೆಯುತ್ತಿತ್ತು ಎಂದರೆ ಸರಿ . ದಾವಾ ಆಸ್ತಿಯಲ್ಲಿರುವ ಶೈಕ್ಷಣಿಕ ಸಂಸ್ಥೆಯನ್ನು 1954-55 ರಲ್ಲಿ ಮಾರ್ಡನ್ ಎಜ್ಯುಕೇಶನ್ ಬೋರ್ಡಗೆ ವರ್ಗಾಯಿಸಲಾಗಿದೆ ಎಂದರೆ ಸರಿಯಲ್ಲ .

2 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಬಾಡಿಗೆ ಕೊಟ್ಟ ಬಗ್ಗೆ ಈ ಹಿಂದೆಯೇ ನಿರ್ಣಯ ಆಗಿದೆ ಆದರೆ ಇತ್ತಿಚೆಗೆ ನಾವು ನಿರ್ಣಯ ತೆಗೆದುಕೊಂಡಿಲ್ಲ . ಈ ಬಗ್ಗೆ 1972 ರಲ್ಲಿ ಠರಾವು ಆಗಿದೆ ಆದರೆ ಈ ಕುರಿತಾದ ದಾಖಲೆ ನಮ್ಮಲ್ಲಿ ಇಲ್ಲ . ಪ್ರತಿವಾದಿ 1 ರಿಂದ 5 ರವರಿಗೆ ಬಾಡಿಗೆ ಕೊಡಿ ಎಂದು ನಾವು ಕೇಳಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ 1 , 2 , 4 ಮತ್ತು 5 ರವರು ನಮ್ಮ ವಾದಿ ಸಂಸ್ಥೆಯ ಜೊತೆ ಬಾಡಿಗೆ ಒಪ್ಪಂದ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ 1 , 2 , 4 ಮತ್ತು 5 ರವರು ದಾವಾ ಸ್ವತ್ತನ್ನು ಬಾಡಿಗೆ ತೆಗೆದುಕೊಂಡಿಲ್ಲ ಆದರೆ ವಾದಿಯರು ಸುಳ್ಳು ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ . ದಾವಾ ಸ್ವತ್ತನ್ನು ಪ್ರತಿವಾದಿ 1 , 2 , 4 ಮತ್ತು 5 ರವರು ಮಾಲೀಕತ್ವ ನಾತೆಯಿಂದ ಅವರೇ ಶಾಲೆ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ . ದಾವಾ ಸ್ವತ್ತಿನಲ್ಲಿ

ಕಟ್ಟಡವನ್ನು ಸದರಿ ಪ್ರತಿವಾದಿ 1 , 2 , 4 ಮತ್ತು 5 ರವರು ದುರಸ್ತಿ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ ನಮ್ಮ ವಾದಿ ಸಂಸ್ಥೆಯ ಕಚೇರಿ ಇಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಚೆಕ್ಕು ಬಂದಿ ಸರಿಯಿಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತಿನಲ್ಲಿನ ಕಟ್ಟಡ ಅದು ಬಿಳ್ಳುವ ಹಂತದಲ್ಲಿ ಇಲ್ಲ ಎಂದರೆ ಸರಿಯಲ್ಲ . ಸದರಿ ಕಟ್ಟಡವು ಸುಸ್ಥಿತಿಯಲ್ಲಿ ಇಲ್ಲ ಎಂಬುವುದನ್ನು ತೋರಿಸುವ ದಾಖಲೆಯನ್ನು ಹಾಜರುಪಡಿಸಿಲ್ಲ . ನಿಪಿ-2 ರಂತೆ ಲೀಸ್ ಡಿಡನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ 1 , 2 , 4 ಮತ್ತು 5 ರವರು ನಮ್ಮ ಸಂಸ್ಥೆಗೆ ಬಾಡಿಗೆ ಪಾವತಿಸಿಲ್ಲ ಆದರೂ ನಿಪಿ-10 ನ್ನು ಸೃಷ್ಟಿ ಮಾಡಿಕೊಂಡಿದ್ದೆವೆ ಎಂದರೆ ಸರಿಯಲ್ಲ . ಈ ದಾವೆಯು ಅವಧಿ ಮೀರಿದ ದಾವೆ ಎಂದರೆ ಸರಿಯಲ್ಲ . ನಾವು ದಾವಾ ಸ್ವತ್ತಿನ ಮಾಲೀಕರಿರುವುದಾಗಿ ಮತ್ತು ಮಾಲೀಕ ನಾತೆಯಿಂದ ಬಾಡಿಗೆ ಕೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ . ನಾವು ಕಾನೂನಿನ ರೀತಿ ದಾವಾ ಸ್ವತ್ತಿನ ಮಾಲೀಕತ್ವದ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ಕಾನೂನು ರೀತಿ ದಾವಾ ಸ್ವತ್ತಿನ ಮಾಲೀಕತ್ವ ನಮ್ಮ ಸಂಸ್ಥೆಗೆ ವರ್ಗಾವಣೆ ಆಗಿಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತು ಪ್ರಸ್ತುತ ಸರ್ಕಾರದ ಅಧೀನದಲ್ಲಿದೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.